# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1025 (2167)
2. ಸದಸ್ಯರ ಹೆಸರು : ಶ್ರೀ ಟಿ.ಎನ್ ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 26.03.2026
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಎತ್ತಿನಹೊಳೆ ಯೋಜನೆಯಡಿ 2027ರ ಅಂತ್ಯದೊಳಗೆ ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕುಡಿಯುವ ನೀರಿಗಾಗಿ ಅಲ್ಲಿನ ಕೆರೆಗಳಿಗೆ ನೀರು ತುಂಬಿಸುವ ಕಾರ್ಯ ಸರ್ಕಾರ ಕೈಗೊಂಡಿದೆಯೇ; (ಹಾಗಿದ್ದಲ್ಲಿ, ಈ ಬಗ್ಗೆ ಆಗಿರುವ ಪ್ರಗತಿಯ ವಿವರಗಳನ್ನು ಒದಗಿಸುವುದು)</td><td rowspan="2">ಅನುದಾನದ ಲಭ್ಯತೆಯ ಮೇರೆಗೆ ಆದ್ಯತೆ ಮೇಲೆ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ಅಕ್ಟೋಬರ್ 2027ರ ಅಂತ್ಯಕ್ಕೆ ಸಂಪೂರ್ಣವಾಗಿ ಪೂರ್ಣಗೊಳಿಸಿ, ಉದ್ದೇಶಿತ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ ಹಾಗೂ ಹಾಸನ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸಲು ಯೋಜಿಸಲಾಗಿರುತ್ತದೆ.<br><br>ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಒಟ್ಟು 2.674 ಟಿ.ಎಂ.ಸಿ ಕುಡಿಯುವ ನೀರಿಗಾಗಿ ಮೀಸಲಿಡಲಾಗಿದ್ದು, ತಾಲ್ಲೂಕುವಾರು ವಿವರಗಳು ಕೆಳಗಿನಂತಿವೆ.<br><br>
<table>
<tr><th>ಕ್ರ. ಸಂ</th><th>ಜಿಲ್ಲೆ</th><th>ತಾಲ್ಲೂಕು</th><th>ಕುಡಿಯುವ ನೀರಿಗಾಗಿ ನೀರಿನ ಹಂಚಿಕೆ ಪ್ರಮಾಣ</th></tr>
<tr><td rowspan="7">1</td><td rowspan="7">ಬೆಂಗಳೂರು ಗ್ರಾಮಾಂತರ</td><td>ನೆಲಮಂಗಲ</td><td>0.405</td></tr>
<tr><td>ದೊಡ್ಡಬಳ್ಳಾಪುರ</td><td>0.592</td></tr>
<tr><td>ದೇವನಹಳ್ಳಿ</td><td>0.41</td></tr>
<tr><td>ಹೊಸಕೋಟೆ</td><td>0.517</td></tr>
<tr><td>ಹೆಸರುಘಟ್ಟ ಜಲಾಶಯ</td><td>0.50</td></tr>
<tr><td>ದೇವನಹಳ್ಳಿ ಕೈಗಾರಿಕ ಪ್ರದೇಶ</td><td>0.25</td></tr>
<tr><td>ಒಟ್ಟು</td><td>2.674</td></tr>
</table></td></tr>
<tr><td>ಆ)</td><td>ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಿಗೆ ಎತ್ತಿನಹೊಳೆ ಯೋಜನೆಯ ಮೂಲಕ ಕುಡಿಯುವ ನೀರು ಹರಿಸುವ ಯೋಜನೆಯು ಸೇರಿದೆಯೇ; ಸೇರಿದ್ದಲ್ಲಿ, ಈ ಬಗ್ಗೆ ವಿವರ ನೀಡುವುದು;</td></tr>
</table>

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| (ಇ) | ಯೋಜನೆ ಕಾಮಗಾರಿಯಿಂದ ಎತ್ತಿನಹೊಳೆ ಯೋಜನೆಯ ಮೂಲ ನದಿ ಕೆಂಪುಹೊಳೆ ನೀರಿನ ಸಾಮರ್ಥ್ಯ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೆಂಪುಹೊಳೆಯಲ್ಲಿ ನೀರು ಶೇಖರಣಾ ಸಾಮರ್ಥ್ಯವೆಷ್ಟು; (ವಿವರ ನೀಡುವುದು) | ಅನುಮೋದಿತ ಯೋಜನಾ ವರದಿಯಲ್ಲಿ ಕೆಂಪುಹೊಳೆಯನ್ನು ಪರಿಗಣಿಸಿರುವುದಿಲ್ಲ. |
| (ಈ) | ಈ ಯೋಜನೆಗೆ ಮುಂಚೆ ನಿಗದಿಪಡಿಸಿದ ಮೊತ್ತವೆಷ್ಟು ಹಾಲಿ ಹೆಚ್ಚಿಗೆ ಮಾಡಿರುವ ಮೊತ್ತವೆಷ್ಟು; (ವಿವರವಾದ ಮಾಹಿತಿ ಒದಗಿಸುವುದು) | ಈ ಯೋಜನೆಯ ಮೂಲ ಅಂದಾಜು (line estimate) ಮೊತ್ತ ರೂ.8,323.50 ಕೋಟಿಗಳಾಗಿರುತ್ತದೆ (SR 2011-2012). ಪರಿಷ್ಕೃತ ಅಂದಾಜು ಮೊತ್ತ ರೂ. 12,912.36 ಕೋಟಿಗಳಾಗಿದ್ದು, (SR 2012-2013) ಮತ್ತು ಪುನರ್ ಪರಿಷ್ಕೃತ ಅಂದಾಜು ಮೊತ್ತ ರೂ.23,251.66 ಕೋಟಿಗಳಾಗಿರುತ್ತದೆ (SR 2018-2019). |
| (ಉ) | ಇಲ್ಲಿಯವರೆಗೆ ಎಷ್ಟು ಮೊತ್ತವನ್ನು ಈ ಯೋಜನೆಗೆ ಖರ್ಚು ಮಾಡಲಾಗಿದೆ; (ವಿವರ ಒದಗಿಸುವುದು) ಬಾಕಿ ಉಳಿದಿರುವ ಕಾಮಗಾರಿಗಳು ಯಾವುವು; ಅವುಗಳನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಿ, ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು? (ಸಂಪೂರ್ಣ ವಿವರ ನೀಡುವುದು) | ಈ ಯೋಜನೆಗಾಗಿ ಫೆಬ್ರವರಿ 2026ರ ಅಂತ್ಯಕ್ಕೆ ಸಂಚಿತ ರೂ.18,205.55 ಕೋಟಿಗಳ ಆರ್ಥಿಕ ಪ್ರಗತಿ ಸಾಧಿಸಲಾಗಿರುತ್ತದೆ.<br><br>ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿರುವ ಎಲ್ಲಾ ಪ್ಯಾಕೇಜ್ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಅನುದಾನದ ಲಭ್ಯತೆಯ ಮೇರೆಗೆ ಆದ್ಯತೆ ಮೇಲೆ ಯೋಜನೆಯನ್ನು ಅಕ್ಟೋಬರ್ 2027ರ ಅಂತ್ಯಕ್ಕೆ ಸಂಪೂರ್ಣವಾಗಿ ಪೂರ್ಣಗೊಳಿಸಿ ಉದ್ದೇಶಿತ, ಬರಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸಲು ಯೋಜಿಸಲಾಗಿರುತ್ತದೆ. |

**ಸಂಖ್ಯೆ: ಜಸಂಇ 61 ಡಬ್ಲ್ಯೂಎಲ್ಎ 2026**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**